2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಪಿಂಚಣಿ ಸೌಲಭ್ಯ ತಡೆಹಿಡಿದಿರುವ ಬಗ್ಗೆ

2(18) ಶ್ರೀ ಶಂಕರಲಿಂಗೇಗೌಡ. ಹೆಚ್.ಎಸ್. (ಚಾಮರಾಜನಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಮಾಜಿಕ ಭದ್ರತಾ, ಯೋಜನೆಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆ, ಹೀಗೆ ವಿವಿಧ ಯೋಜನೆಗಳಡಿ ಪಿಂಚಣಿ ಸೌಲಭ್ಯ ಕೋರಿ ರಾಜ್ಯಾದ್ಯಂತ ಪ್ರತಿ ತಾಲ್ಲೂಕಿನಲ್ಲಿ ವಿತರಣೆಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಎಷ್ಟು ತಿಂಗಳಿನಿಂದ ಅರ್ಜಿಗಳು ವಿಲೇವಾರಿಯಾಗಿದೆ ಬಾಕಿ ಉಳಿದಿವೆ. ಯಾವ ಕಾರಣಕ್ಕಾಗಿ ಹೊಸದಾಗಿ ಪಿಂಚಣಿ ಸೌಲಭ್ಯ ನೀಡುವುದನ್ನು ತಡೆಹಿಡಿಯಲಾಗಿದೆ;

ಇ) ಈ ಸೌಲಭ್ಯವನ್ನು ಮರು ಜಾರಿಗೊಳಿಸಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ. ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

ಅ) ರಾಜ್ಯಾದ್ಯಂತ ಪ್ರತಿ ತಾಲ್ಲೂಕಿನಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ (ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ).

ವೃದ್ಧಾಪ್ಯ ವೇತನ	–	2251
ವಿಧವಾ ವೇತನ	–	17,875
ಅಂಗವಿಕಲ ವೇತನ	–	12,143
ಸಂಧ್ಯಾ ಸುರಕ್ಷಾ ಯೋಜನೆ	–	36,100
	ಒಟ್ಟು	**68,639**

ಆ) ಸುತ್ತೋಲೆ ಸಂಖ್ಯೆ: ಆರ್‌ಡಿ 62 ಡಿಎಸ್‌ಪಿ 2009 (ಭಾಗ–1), ದಿನಾಂಕ:11/02/2011 ರಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಹಾಲಿ ಇರುವ ಫಲಾನುಭವಿಗಳ ಭೌತಿಕ ಪರಿಶೀಲನಾ ಕಾರ್ಯ ಮುಗಿಯುವವರೆಗೂ ಹೊಸ ಮಂಜೂರಾತಿಗಳನ್ನು ನೀಡಬಾರದೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಅರ್ಜಿಗಳು ಮಾರ್ಚ್ ತಿಂಗಳಿನಿಂದ ವಿಲೇವಾರಿಯಾಗದೆ ಬಾಕಿ ಉಳಿದಿವೆ. ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಬಹಳಷ್ಟು ಸಂದರ್ಭದಲ್ಲಿ ಒಂದೇ ವ್ಯಕ್ತಿ ಒಂದಕ್ಕಿಂತ ಹೆಚ್ಚು

ಪಿಂಚಣಿ ಪಡೆಯುತ್ತಿರುವುದು ಹಾಗೂ ತಾಲ್ಲೂಕು/ನಾಡ ಕಛೇರಿಗಳಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಸಂಬಂಧಿಸಿದಂತೆ ರಿಜಿಸ್ಟರ್ ಪುಸ್ತಕಗಳನ್ನು ನಿರ್ವಹಿಸುತ್ತಾ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ನ್ಯೂನ್ಯತೆಗಳನ್ನು ಸರಿಪಡಿಸಿ, ಯೋಜನೆಯಡಿ ಹಾಲಿ ಇರುವ ಫಲಾನುಭವಿಗಳಿಗೆ ಪಿಂಚಣಿಯನ್ನು ಪಾರದರ್ಶಕ ಹಾಗೂ ಪರಿಣಾಮಕಾರಿಯಾಗಿ ಬ್ಯಾಂಕ್ ಖಾತೆಯ/ಸ್ಮಾರ್ಟ್ ಕಾರ್ಡ್ ಮೂಲಕ ವಿತರಿಸುವ ದೃಷ್ಟಿಯಿಂದ ಹೊಸದಾಗಿ ಪಿಂಚಣಿ ಮಂಜೂರಾತಿ ನೀಡುವುದನ್ನು ಮೂರು ತಿಂಗಳ ಕಾಲ ತಡೆಹಿಡಿಯಲಾಗಿದೆ.

ಇ) ಈ ಸೌಲಭ್ಯಗಳನ್ನು ನಿಲ್ಲಿಸಲಾಗಲಿಲ್ಲ. ಹಾಲಿ ಇರುವ ಪಿಂಚಣಿದಾರರಿಗೆ ಪಿಂಚಣಿ ಹಣವನ್ನು ಖಜಾನೆ ಇಲಾಖೆ ಮೂಲಕ ಪಾವತಿಸಲಾಗುತ್ತಿದೆ. ಹೊಸದಾಗಿ ಪಿಂಚಣಿ ಮಂಜೂರಾತಿ ಕಾರ್ಯವನ್ನು ಹಾಲಿ ಇರುವ ಪಿಂಚಣಿದಾರರ ಭೌತಿಕ ಪರಿಶೀಲನಾ ಕಾರ್ಯದ ಪ್ರಗತಿಯನ್ನು ಪರಿಶೀಲಿಸಿ, ನಂತರ ನಿರ್ಧರಿಸಲಾಗುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಬಡವರ ಮತ್ತು ಹಿಂದುಳಿದವರ ಅಭಿವೃದ್ಧಿಯ ಹರಿಕಾರವಾಗಿ ಈ ರಾಜ್ಯದ ಬಡ ಜನರ ಏಳಿಗೆಗೆ ಶ್ರಮಿಸುವುದಾಗಿ ಕೊಟ್ಟ ಆಶ್ವಾಸನೆ ಕೇವಲ ಆಶ್ವಾಸನೆಯಾಗಿಯೇ ಉಳಿಯಬಾರದು ಎಂಬುದು ನನ್ನ ಅನಿಸಿಕೆ. ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಒಟ್ಟಾರೆ 68,639 ಅರ್ಜಿಗಳು ಖಾಲಿ ಉಳಿದಿದೆ. ಇದು ಅಧಿಕಾರಿಗಳ ನಿರ್ಲಕ್ಷವೊ ಅಥವಾ ಸರ್ಕಾರ ಅವರ ಮೇಲೆ ಸರಿಯಾಗಿ ಗದಾಪ್ರಹಾರ ಮಾಡಲಿಲ್ಲವೊ ಎನ್ನತಕ್ಕದ್ದು ನನಗೆ ಗೊತ್ತಾಗುತ್ತಿಲ್ಲ. ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರತಕ್ಕ ಯಾವುದೇ ಅಧಿಕಾರಿಗಳು ಈ ಬಡವರ ಮೇಲೆ ಏನಾದರು ಬ್ರಹ್ಮಾಸ್ತ್ರವನ್ನು ಬಿಡುವುದಾದರೆ ಸರ್ಕಾರ ಬಡವರಿಗೆ ವಂಚನೆ ಮಾಡಿದಂತಾಗುತ್ತದೆ. ಅದು ಆಗಬಾರದು. ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು ಎನ್ನುವ ದೃಷ್ಟಿಯಿಂದ ನಾನು ಕೇಳಿರುವ ಮೂರು ಪ್ರಶ್ನೆಗಳಿಗೆ ಸಮಪರ್ಕವಾದ ಉತ್ತರವನ್ನು ಕಂದಾಯ ಸಚಿವರು ಹೇಳುತ್ತಾರೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಮತ್ತು ಸಂಧ್ಯಾ ಸುರಕ್ಷಾ ಆಗಿರಬಹುದು ಎಲ್ಲವನ್ನೂ ತೆಗೆದುಕೊಂಡರೆ ರಾಜ್ಯದಲ್ಲಿ ಸುಮಾರು 39,98,185 ಫಲಾನುಭವಿಗಳು ಅದರ ಲಾಭವನ್ನು ಈಗಾಗಲೆ ಪಡೆಯುತ್ತಿದ್ದಾರೆ.

ಈ ಬಗ್ಗೆ ಬಹಳಷ್ಟು ದೂರುಗಳು ಬಂದ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಪರಿಶೀಲನೆ ಮಾಡಬೇಕು, verification ಮಾಡಬೇಕೆಂದು ನಿರ್ದೇಶನವನ್ನು ಕೊಟ್ಟಿದ್ದರು. verification ಕೆಲಸ ನಡೆಯುತ್ತಿದೆ. ಆದರೂ ನಾವು ಯಾವೊಬ್ಬ pension ದಾರರಿಗೂ pension pension ಕೊಡಬಾರದು ಎಂದು ಹೇಳಿಲ್ಲ. pension ಯಾರ್ಯಾರಿಗೆ ಕೊಡಬೇಕಾಗಿದೆಯೊ ಮಾರ್ಚ್‌ವರೆಗೆ ಕೊಟ್ಟಾಗಿದೆ. ತಮ್ಮ ಗಮನಕ್ಕೆ ತರುವುದೇನೆಂದರೆ ವಿವಿಧ ಯೋಜನೆಗಳಲ್ಲಿ ಸುಮಾರು 2,93,691 ಬೋಗಸ್ pension ದಾರರು ಇದರ ಲಾಭವನ್ನು ಪಡೆಯುತ್ತಿದ್ದಾರೆ ಎಂಬುದು ಗೊತ್ತಾಗಿದೆ. ಅಧಿಕಾರಿಗಳ ಮೂಲಕ ಅವೆಲ್ಲವನ್ನು ರದ್ದುಪಡಿಸಿ ಇನ್ನು ಒಂದು ತಿಂಗಳಿನಲ್ಲಿ scrutiny ಮಾಡುವ ಕೆಲಸ ಪೂರ್ಣವಾಗುತ್ತದೆ. ಅದಾದಮೇಲೆ 68,639 ಅರ್ಜಿಗಳೇನು ಬಾಕಿ ಇದೆ ಅದನ್ನು ಕೂಡ ಪರಿಶೀಲನೆ ಮಾಡಿ ಖಂಡಿತ ಅವರಿಗೆಲ್ಲಾ pension ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು:– ಮಾನ್ಯ ಶಂಕರಲಿಂಗೇಗೌಡರು ಬಹಳ ಮಹತ್ತರವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಮನೆಯ ಮೂಲಕ ನಾನು ಸ್ಪಷ್ಟವಾದ ಸೂಚನೆಯನ್ನು ಅಧಿಕಾರಿಗಳಿಗೆ ಕೊಡಲು ಇಚ್ಛೆಪಡುತ್ತೇನೆ. ಮಾರ್ಚ್ 31 ರವರೆಗೂ ವೃದ್ಧಾಪ್ಯ ವೇತನ, ವಿಧವಾ ವೇತನ, ಭಾಗ್ಯಲಕ್ಷ್ಮೀ ಯೋಜನೆ, ಅಂಗವಿಕಲ ವೇತನ ಮತ್ತು ಸಂಧ್ಯಾ ಸುರಕ್ಷಾ ಯೋಜನೆ ಯಾವುದೇ ಇರಬಹುದು, ಒಂದು ಸಲ ಮಂಜೂರಾದಮೇಲೆ ಯಾವುದೇ ಕಾರಣಕ್ಕೆ ಅದನ್ನು ರದ್ದುಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ನಾವು ಭರವಸೆಯನ್ನು ಕೊಟ್ಟಂತೆ ಅವರೆಲ್ಲರುಗೂ ಹಣವನ್ನು ಪಾವತಿ ಮಾಡಬೇಕು. ಇದರ ಬಗ್ಗೆ ಈಗಾಗಲೇ ಸ್ಪಷ್ಟವಾದ ಸೂಚನೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಮತ್ತೊಮ್ಮೆ ಈ ಮನೆಯ ಮೂಲಕ ಸೂಚನೆಯನ್ನು ಕೊಡುತ್ತಿದ್ದೇನೆ. ಮಾರ್ಚ್ ನಂತರ ಯಾರು ಆ ನಿಯಮಾವಳಿಯನ್ನು ಮೀರಿ ಪಡೆಯುತ್ತಿದ್ದಾರೆ ಅದನ್ನು ಮಾತ್ರ scrutiny ಮಾಡಿ ಬಂದಿರುವ ಅರ್ಜಿಗಳಿಗೆ ಮಂಜೂರಾತಿಯನ್ನು ಕೊಡಬೇಕೆಂದು ಮಾತ್ರ ಸೂಚನೆ ಕೊಟ್ಟಿದ್ದೇವೆಯೇ ಹೊರತು ಮಾರ್ಚ್ 31ರವರೆಗೆ ಕೊಟ್ಟಿರುವ ಎಲ್ಲರಿಗೂ pension ಪಾವತಿ ಮಾಡುತ್ತೇವೆ. ಏನಾದರೂ ಅವರು ಬದುಕಿಲ್ಲದಿದ್ದರೆ, ಕಾನೂನು ಬಾಹಿರವಾಗಿದ್ದರೆ, ಬೇರೆ ತೊಂದರೆಗಳಾಗಿರುವುದನ್ನು ಬಿಟ್ಟರೆ ಉಳಿದ ಎಲ್ಲಾ ಸಂದರ್ಭದಲ್ಲಿ ಯಾವೊಬ್ಬ

ಫಲಾನುಭವಿಗೂ ತೊಂದರೆ ಆಗದ ರೀತಿಯಲ್ಲಿ ಆ ತಿಂಗಳ pension ನ್ನು ಪಾರದರ್ಶಕತೆಯನ್ನು ಇಟ್ಟುಕೊಂಡು ಬ್ಯಾಂಕ್‌ನ ಮೂಲಕ ಅನ್ಯಾಯ ಆಗದ ರೀತಿಯಲ್ಲಿ ವಿತರಣೆ ಮಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದರಿಂದ ವಾಪಸ್ ಹೋಗುವ ಪ್ರಶ್ನೆಯೇ ಇಲ್ಲ. ಹೊಸದಾಗಿ ಕೊಡುವಂಥ ಸಂದರ್ಭದಲ್ಲಿ ಬಂದಿರುವಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಂಡು ನಿಯಮಾವಳಿಯ ಚೌಕಟ್ಟಿನಲ್ಲಿ ಅವರು ಇದ್ದರೆ ಮಾತ್ರ ಮಂಜೂರಾತಿ ನೀಡುವಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಕೆಲವು ಅಧಿಕಾರಿಗಳು ಜನರ ಮೇಲೆ ವಿಚಿತ್ರವಾದ ರೀತಿಯಲ್ಲಿ ವರ್ತನೆ ಮಾಡುತ್ತಾರೆ. ಅಧಿಕಾರಿಗಳಿಗೆ ಬಡವರ ಬಗ್ಗೆ ಸೌಜನ್ಯತೆ, ಕಾಳಜಿಯನ್ನು ಇಟ್ಟುಕೊಂಡು ಕೆಲಸ ಮಾಡಲು ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ತಂಗಡಗಿ:– ಹೊಸ ಅರ್ಜಿಗಳನ್ನು ಮಾತ್ರ ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ನಿಜವಾಗಿಯೂ ಹೊಸ ಅರ್ಜಿಗಳಿಗಿಂತಾ ಮೊದಲು ಏನು ಪೆನ್‌ಷನ್ ಕೊಡುತ್ತಿರೊ ಅವುಗಳಿಗೆ ಕನಿಷ್ಠ 3–4 ತಿಂಗಳವರೆಗೆ ಪೇಮಂಟ್ ಆಗಿಲ್ಲ. ನಮ್ಮ ಜಿಲ್ಲೆಯಲ್ಲಿ ಅಷ್ಟೆ ಅಲ್ಲ ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ. ಹೊಸ ಅರ್ಜಿಗಳನ್ನು ವಿಲೇವಾರಿ ಮಾಡುತ್ತಿದ್ದೀರಿ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಮೊದಲು ಏನು pension ಕೊಡುತ್ತಿದ್ದರು ಅವುಗಳು ಕನಿಷ್ಠ 3–4 ತಿಂಗಳವರೆಗೆ ನಿಂತುಹೋಗಿರುವ ಉದಾಹರಣೆಗಳಿವೆ ಅವರಿಗೆ ಯಾವುದೇ pension ಬಂದಿಲ್ಲ. ಇದನ್ನು ಪಾವತಿ ಮಾಡಲು ಒಂದು ಸಮಯವನ್ನು ನಿಗದಿ ಮಾಡಿದರೆ ಒಳ್ಳೆಯದು. ಇದು ಬಹಳ ಒಳ್ಳೆಯ ಯೋಜನೆ. ಬಡವರಿಗೆ, ವಯಸ್ಸಾದವರಿಗೆ ಒಂದು ಸಲ pension ಬರುತ್ತಿದೆಯೆಂದರೆ ತೊಂದರೆ ಇರುವುದಿಲ್ಲ. ಅವರ ಮನೆಯ ಮಕ್ಕಳಾಗಲಿ, ಬೇರೆಯವರಾಗಲಿ ಯಾರು ಸಹ ಅವರ ಸಹಾಯಕ್ಕೆ ಬರುವುದಿಲ್ಲ, pension ಬರುತ್ತದೆ ಅದರಿಂದ ಜೀವನ ಮಾಡುತ್ತಾರೆ ಎನ್ನುವ ಭಾವನೆ ಇವತ್ತು ಇದೆ. ಹೊಸ ಅರ್ಜಿ ವಿಲೇವಾರಿ ಮಾಡುತ್ತಿರುವುದು ಸತ್ಯ. ಆದರೆ ಇದುವರೆಗೆ ಕೊಡುತ್ತಿದ್ದವರಿಗೆ 3–4 ತಿಂಗಳ ವರೆಗೆ ಕೊಟ್ಟಿಲ್ಲ. ಇದನ್ನು ಪಾವತಿ ಮಾಡಲು ದಯಮಾಡಿ ಸಮಯವನ್ನು ನಿಗದಿ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಜುಲೈ 15 ರ ಒಳಗೆ ಬೇರೆ ಎಲ್ಲವನ್ನು ಬದಿಗೊತ್ತಿ ಯಾರ್ಯಾರಿಗೆ pension ಬಾಕಿ ಇದೆ ಅದನ್ನು ಸಂಪೂರ್ಣವಾಗಿ

ಪಾವತಿ ಮಾಡಲು ಇವತ್ತೇ ಹಣಕಾಸು ಇಲಾಖೆಗೆ ಸೂಚನೆ ಕೊಡುತ್ತೇನೆ. ಮೊದಲು ಬಾಕಿ ಹಣ ಪಾವತಿ ಮಾಡಬೇಕು. ನಂತರ ಉಳಿದ ಕೆಲಸ. ಆದ್ದರಿಂದ ಆದ್ಯತೆಯ ಮೇರೆ ಅವರಿಗೆ ಆಯಾಯ ತಿಂಗಳು ದುಡ್ಡು ಬಂದಾಗ ಮಾತ್ರ ಅವರು ನೆಮ್ಮದಿಯಿಂದ ಅವರ ಸೊಸೆಯಂದಿರು, ಮಕ್ಕಳು ನೋಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಅವರಿಗೆ ತೊಂದರೆಯಾಗುತ್ತದೆಂದು ನಮಗೆ ಗೊತ್ತಿದೆ. ಆದ್ದರಿಂದ ಜುಲೈ 15 ನ್ನು ಸಮಯವಾಗಿ ನಿಗದಿ ಮಾಡಿ ಮಾರ್ಚ್ ಕೊನೆಯವರೆಗೆ ಬಾಕಿ ಇರುವ ಎಲ್ಲವನ್ನು ಪೇಮೆಂಟ್ ಮಾಡುವ ವ್ಯವಸ್ಥೆಯನ್ನು ಮಾಡಿಸುತ್ತೇನೆ.

ಅಧ್ಯಕ್ಷರು: ಮಾನ್ಯ ನರೇಂದ್ರ ಸ್ವಾಮಿಯವರೆ, ತಮ್ಮ ಪ್ರಶ್ನೆ ಜಲಸಂಪನ್ಮೂಲ ಇಲಾಖೆಗೆ ವರ್ಗಾವಣೆಯಾಗಿದೆ. ಆದ್ದರಿಂದ ನಾಳೆ ಅದಕ್ಕೆ ಉತ್ತರ ಕೊಡಿಸುತ್ತೇನೆ.

ರೈತರ ಜಮೀನಿನ ಸರ್ವೆ ನಕ್ಷೆ

4 (42) ಶ್ರೀ ಪ್ರತಾಪ್‌ಗೌಡ ಪಾಟೀಲ್ (ಮಸ್ಕಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಜಮೀನಿನ ಸರ್ವೆ ನಕ್ಷೆ ನೀಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರಿಪಡಿಸುವುದಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜೆ.ಕರುಣಾಕರ ರೆಡ್ಡಿ(ಕಂದಾಯ ಸಚಿವರು)

ಅ) ಬಂದಿದೆ.

ರಾಜ್ಯದಲ್ಲಿ ಜಮೀನುಗಳ ಹಿಸ್ಸಾ ಸರ್ವೆ ಆದ ನಂತರ ಪಹಣಿಗಳ ಇಂಡೀಕರಣವಾಗದೇ ಇರುವುದು, ಪಹಣಿ ಮತ್ತು ಆಕಾರಬಂದ್ ವಿಸ್ತೀರ್ಣಕ್ಕೆ ತಾಳೆ ಇಲ್ಲದೇ ಇರುವುದು, ಆಸ್ತಿ ವಿಂಗಡಣೆ, ಭೂಸ್ವಾಧೀನ, ಭೂಮಂಜೂರಾತಿ ಹಾಗೂ ಭೂಸುಧಾರಣಾ ಆದೇಶಗಳಿಂದ ಬಹುಮಾಲೀಕತ್ವದ ಪಹಣಿಗಳಾಗಿರುತ್ತದೆ. ಪಹಣಿ ತಿದ್ದುಪಡಿ ಮತ್ತು ಇಂಡೀಕರಣ ಕಾರ್ಯವನ್ನು ಪೂರ್ಣಗೊಳಿಸಿದ ನಂತರವೇ ಸರ್ವೆ ಕಾರ್ಯ ನಡೆಸಬೇಕಾಗಿರುತ್ತದೆ. ಹೀಗಾಗಿ ರೈತರಿಗೆ ಸರ್ವೆ ನಕ್ಷೆ ನೀಡುವಲ್ಲಿ ಸ್ವಲ್ಪ ಮಟ್ಟಿನ ವಿಳಂಬವಾಗುತ್ತಿದೆ. ಇದಲ್ಲದೆ ಭೂಮಾಪನ ಇಲಾಖೆಯಲ್ಲಿನ ಸಿಬ್ಬಂದಿಯ ಕೊರತೆಯೂ ಸಹ ವಿಳಂಬಕ್ಕೆ ಕಾರಣವಾಗಿರುತ್ತದೆ.

ಪಹಣಿ ತಿದ್ದುಪಡಿ ಮತ್ತು ಇಂಡೀಕರಣ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಎಲ್ಲಾ ಕಂದಾಯಾಧಿಕಾರಿಗಳಿಗೆ ಕಟ್ಟುನಿಟ್ಟಿನ